ರೇಣುಕಮ್ಮ ಪ್ರೇಕ್ಷಕರ ಮುಂದೆ ಬಂದರು. ನಾಯಕಿ, ತಾಯಿ ಪಾತ್ರಗಳಲ್ಲಿ ಕಾಯಂ ಆಗಿ ಕಾಣಿಸಿಕೊಳ್ಳುತ್ತಿದ್ದ ಇವರು ಗಟವಾಣಿ ಪಾತ್ರಗಳಲ್ಲೂ ಪ್ರೇಕ್ಷಕರ ಮೆಚ್ಚುಗೆ ಪಡೆದರು. ಸಹನಾ ಮೂರ್ತಿಯಾಗಿ, ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ಹೊತ್ತುಕೊಂಡ 'ತಾಯಿ' ಗಯ್ಯಾಳಿಯಂತೆ, ಗರತಿಯಂತೆ ನಟಿಸುವುದು ಸುಲಭವಲ್ಲ. ಅಂತಹ ಪಾತ್ರಗಳನ್ನೂ ಲೀಲಾಜಾಲವಾಗಿ ನಿಭಾಯಿಸಿದರು.

ರೇಣುಕಮ್ಮ ಪುರುಷ ಪಾತ್ರಗಳಲ್ಲಿ ಯಶಸ್ವಿಯಾಗಿದ್ದು ಅಚ್ಚರಿಯಾದರೂ ನಿಜ. ಕೊಟ್ಟೂರೇಶ್ವರ ನಾಟ್ಯ ಸಂಘದಲ್ಲಿ 'ಹೇಮರೆಡ್ಡಿ ಮಲ್ಲಮ್ಮ' ಬಹಳ ಜನಪ್ರಿಯವಾದ ನಾಟಕ. ಮೊಕ್ಕಾಂ ಹೂಡುತ್ತಿದ್ದ ಎಲ್ಲಾ ಕ್ಯಾಂಪುಗಳಲ್ಲೂ ಬೇಡಿಕೆಯ ನಾಟಕ ಇದು. ಇದರಲ್ಲಿ ರೇಣುಕಮ್ಮ ವಹಿಸುತ್ತಿದ್ದ ಪಾತ್ರ ಮಲ್ಲಿಕಾರ್ಜುನದ್ದು. ಈ ಕಂಪೆನಿಯಲ್ಲಿ ಇದ್ದಷ್ಟೂ ಕಾಲವೂ ಅವರೇ ಮಲ್ಲಿಕಾರ್ಜುನನ ಪಾತ್ರ ನಿರ್ವಹಿಸಿದರು. ಎಲ್ಲಾ ಪ್ರದರ್ಶನಗಳಲ್ಲೂ ಅವರು ಜೀವಂತ ಹಾವನ್ನೇ ಕೊರಳಲ್ಲಿ ಧರಿಸಿ ಪರಮೇಶ್ವರನ ಪಾತ್ರ ನಿರ್ವಹಣೆ ಮಾಡಿದ್ದರು!

ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಹಾಸ್ಯ ಈ ಬಗೆಯ ಎಲ್ಲಾ ನಾಟಕಗಳಲ್ಲೂ ಬಣ್ಣ ಹಚ್ಚಿದ ರೇಣುಕಮ್ಮ 'ಖಾದಿ ಸೀರೆ' ತುಂಬಾ ಯಶಸ್ಸು ಪಡೆದಿತ್ತು. ಅದಕ್ಕೆ ಮುಖ್ಯ ಕಾರಣ, ರಾಜಕೀಯ ಮೇಲಾಟವನ್ನು ವ್ಯಂಗ್ಯವಾಗಿ ರಂಗದ ಮೇಲೆ ಪ್ರಸ್ತುತಪಡಿಸಲಾಗಿತ್ತು. ಅದನ್ನು ಸಮರ್ಥವಾಗಿ ಅಭಿನಯಿಸಿ ನಾಟಕವನ್ನು ಜನಪ್ರಿಯಗೊಳಿಸಿದರು ಈಕೆ.

ಮಹಾ ಕೋಟೇಶ್ವರ ನಾಟ್ಯ ಸಂಘ 'ಖಾದಿ ಸೀರೆ' ನಾಟಕವನ್ನು ಒಂದು ವರ್ಷ ಸತತವಾಗಿ ಒಂದೇ ಸ್ಥಳದಲ್ಲಿ ಪ್ರದರ್ಶಿಸಿತು. ದಾವಣಗೆರೆಯ ನಾಟಕ ಪ್ರೇಮಿಗಳನ್ನು 'ಖಾದಿ ಸೀರೆ'ಗೆ ನಿರಂತರವಾಗಿ ಆಕರ್ಷಿಸಲು ಬಹುಮುಖ್ಯ ಕಾರಣ ಅದರಲ್ಲಿ ಪ್ರಮುಖ ಮಹಿಳಾ ಪಾತ್ರಧಾರಿ ರೇಣುಕಮ್ಮ ಆಗಿದ್ದರು.

ತಾವು ಕೆಲಸ ಮಾಡಿದ ಎಲ್ಲಾ ನಾಟಕ ಕಂಪೆನಿಗಳಲ್ಲೂ ಒಳ್ಳೆಯ ಹೆಸರು ಗಳಿಸಿಕೊಂಡ ಈ ನಟಿ ಮುಖದ ಮೇಲೆ ಮುಪ್ಪಿನ ಗೆರೆಗಳು ಹೆಚ್ಚಾದಂತೆ ಮಾಗಿದ ಅಭಿನಯವನ್ನು ಬಿಂಬಿಸುವಲ್ಲಿ ಸೋತಿದ್ದೇ ಇಲ್ಲ.

ರಂಗಭೂಮಿಯಿಂದ ಚಲನಚಿತ್ರಕ್ಕೆ ಬಂದ ಅವರು ಅಲ್ಲೂ ತಮ್ಮ ಛಾಪು ಒತ್ತಿದರು. ಎಲ್ಲಾ ಪಾತ್ರಗಳನ್ನು ಶ್ರದ್ಧೆಯಿಂದ ನಿರ್ವಹಣೆ ಮಾಡುತ್ತ ಪ್ರಸಿದ್ಧರಾಗಿದ್ದ ಅವರಿಗೆ ಖ್ಯಾತ ಸಿನಿನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ 'ಕ್ರೌರ್ಯ' ದೊಡ್ಡ ಹೆಸರು ತಂದುಕೊಟ್ಟಿತು.

ಕಲಾತ್ಮಕ, ವಾಣಿಜ್ಯ ಹೀಗೆ ಎಲ್ಲಾ ಬಗೆಯ ಚಿತ್ರಗಳಲ್ಲೂ ರೇಣುಕಮ್ಮ ಪಾತ್ರಗಳನ್ನು ಮಾಡಿದರು. ಎಷ್ಟೇ ಪುಟ್ಟ ಪಾತ್ರವಿದ್ದರೂ ಅದನ್ನು ಅರ್ಥ ಮಾಡಿಕೊಂಡು ಅಭಿನಯಿಸುವುದು ಅವರಿಗೆ ರಂಗಭೂಮಿ ಕಾಲದಲ್ಲೇ ಕರಗತವಾಗಿತ್ತು. ಹಾಡು–ಸಂಭಾಷಣೆ ಎಲ್ಲವನ್ನು ಸ್ಪಷ್ಟವಾಗಿ ನಿರ್ವಹಿಸಲು ಶ್ರಮಿಸುತ್ತಿದ್ದರು. 'ತಾಯಿ ಸಾಹೇಬ', 'ಶಬ್ದವೇಧಿ', 'ವೀರಪ್ಪನಾಯಕ', 'ಚಂದ್ರ ಚಕೋರಿ' ಹೀಗೆ ಹಲವು ಚಿತ್ರಗಳಲ್ಲಿ ಅಭಿನಯಿಸಿ ಪ್ರೇಕ್ಷಕರ ಮನದಲ್ಲಿ ನಿಂತಿದ್ದು ಅವರ ವಿಶೇಷ.

ಚಲನಚಿತ್ರದಂತೆ ಕಿರುತೆರೆಯಲ್ಲೂ ಅಭಿನಯಿಸಿದ ಅವರು ಅಲ್ಲಿ ಹೆಚ್ಚಿಗೆ ನಟಿಸಿದ್ದು ಬೊಚ್ಚುಬಾಯಿ ಅಜ್ಜಿಯಾಗಿ. ನಾಯಕಿಯಿಂದ ಹಿಡಿದು ಪುಟ್ಟ ಪಾತ್ರದವರೆಗೂ ಪ್ರತಿಯೊಂದು ಪಾತ್ರಕ್ಕೂ ಜೀವಂತಿಕೆ ತಂದುಕೊಟ್ಟ ರೇಣುಕಮ್ಮ ಮುರುಗೋಡು ಅಪ್ಪಟ ರಂಗಭೂಮಿ ಪ್ರತಿಭೆ; ಚಿತ್ರ ಜಗತ್ತಿನಲ್ಲೂ ತಮ್ಮದೇ ಅಚ್ಚೊತ್ತಿದ ಕಲಾವಿದೆ.